ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿಸಲು ಉದ್ದೇಶಿಸಿರುವ ಪಶ್ಚಿಮ ಘಟ್ಟ ಪ್ರದೇಶದ ಹತ್ತು ಅರಣ್ಯಗಳು ಅಪರೂಪದ ಜೀವ ವೈವಿಧ್ಯಗಳ ತಾಣಗಳು. ಸಾವಿರಾರು ವರ್ಷಗಳಿಂದ ನಿಸರ್ಗ ಪೋಷಿಸಿಕೊಂಡು ಬಂದಿರುವ ಈ ಅರಣ್ಯಗಳಲ್ಲಿರುವ ಜೀವ ಸಂಕುಲಗಳ ಸಂರಕ್ಷಣೆಗಾಗಿ ಇವನ್ನು ವಿಶ್ವ ಪರಂಪರೆಯ ತಾಣಗಳೆಂದು ಪರಿಗಣಿಸಿ ಅವುಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಆಶಯವೇ ನಮ್ಮ ಚುನಾಯಿತ ಪ್ರತಿನಿಧಿಗಳಿಗೆ ಅರ್ಥವಾಗದಿರುವುದು ದುರದೃಷ್ಟಕರ.

# ಹೊಣೆಗೇಡಿತನದ ಪರಮಾವಧಿ

ಕುದುರೆಮುಖ ರಾಷ್ಟ್ರೀಯ ಉದ್ಯಾನವೂ ಸೇರಿದಂತೆ ಪಶ್ಚಿಮಘಟ್ಟ ಪ್ರದೇಶದ ಹತ್ತು ಮೀಸಲು ಅರಣ್ಯಗಳನ್ನು 'ವಿಶ್ವ ಪರಂಪರೆಯ ತಾಣ'ಗಳೆಂದು ಪರಿಗಣಿಸುವಂತೆ ಯುನೆಸ್ಕೊಗೆ ಶಿಫಾರಸು ಮಾಡುವ ಕೇಂದ್ರ ಸರ್ಕಾರದ ಪ್ರಸ್ತಾವವನ್ನು ರಾಜ್ಯದ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ಇತ್ತೀಚೆಗೆ ನಡೆದ ಚುನಾಯಿತ ಪ್ರತಿನಿಧಿಗಳ ಸಭೆ ತಿರಸ್ಕರಿಸಿದೆ. ಕೇಂದ್ರ ಪ್ರಸ್ತಾವವನ್ನು ವಿರೋಧಿಸಲು ಅರಣ್ಯ ಸಚಿವರು ನೀಡಿರುವ ಕಾರಣಗಳು ವಿಚಿತ್ರವಾಗಿವೆ. ಉದ್ದೇಶಿತ ಅರಣ್ಯಗಳನ್ನು ವಿಶ್ವ ಪರಂಪರೆಯ ತಾಣಗಳೆಂದು ಪರಿಗಣಿಸಿದರೆ ಅರಣ್ಯ ಸಂಪತ್ತಿನ ಲೂಟಿಗೆ ಅವಕಾಶ ತಪ್ಪಿಹೋಗುತ್ತದೆ ಎಂಬ ದುರುದ್ದೇಶದಿಂದ ಈ ಪ್ರಸ್ತಾವ ತಿರಸ್ಕರಿಸಿರಬಹುದೇ ಎಂಬ ಅನುಮಾನ ಬರುತ್ತದೆ. ಅರಣ್ಯ ಸಚಿವರು ಮತ್ತು ಪಶ್ಚಿಮ ಘಟ್ಟ ಪ್ರದೇಶದ ಜಿಲ್ಲೆಗಳ ಚುನಾಯಿತ ಪ್ರತಿನಿಧಿಗಳಿಗೆ ವಿಶ್ವ ಪರಂಪರೆಯ ತಾಣ ಎಂದರೇನು ಎಂಬ ಬಗ್ಗೆ ಹೆಚ್ಚಿನ ತಿಳುವಳಿಕೆ ಇದ್ದಂತಿಲ್ಲ.

ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿಸಲು ಉದ್ದೇಶಿಸಿರುವ ಪಶ್ಚಿಮ ಘಟ್ಟ ಪ್ರದೇಶದ ಹತ್ತು ಅರಣ್ಯಗಳು ಅಪರೂಪದ ಜೀವ ವೈವಿಧ್ಯಗಳ ತಾಣಗಳು. ಸಾವಿರಾರು ವರ್ಷಗಳಿಂದ ನಿಸರ್ಗ ಪೋಷಿಸಿಕೊಂಡು ಬಂದಿರುವ ಈ ಅರಣ್ಯಗಳಲ್ಲಿರುವ ಜೀವ ಸಂಕುಲಗಳ ಸಂರಕ್ಷಣೆಗಾಗಿ ಇವನ್ನು ವಿಶ್ವ ಪರಂಪರೆಯ ತಾಣಗಳೆಂದು ಪರಿಗಣಿಸಿ ಅವುಗಳ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಆಶಯವೇ ನಮ್ಮ ಚುನಾಯಿತ ಪ್ರತಿನಿಧಿಗಳಿಗೆ ಅರ್ಥವಾಗದಿರುವುದು ದುರದೃಷ್ಟಕರ. ಈ ಹತ್ತು ಅರಣ್ಯಗಳು ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರ್ಪಡೆಯಾದರೆ ಅವು ಯುನೆಸ್ಕೊದ ನಿಯಂತ್ರಣಕ್ಕೆ ಒಳಪಡುತ್ತವೆ ಎಂಬ ತಪ್ಪುಗ್ರಹಿಕೆ ಅರಣ್ಯ ಸಚಿವರು ಹಾಗೂ ಚುನಾಯಿತ ಪ್ರತಿನಿಧಿಗಳಿಗಿದೆ. ಪಶ್ಚಿಮ ಘಟ್ಟದ ಅರಣ್ಯಗಳನ್ನು ಯುನೆಸ್ಕೊದ ಉಸ್ತುವಾರಿಗೆ ಬಿಟ್ಟುಕೊಡಲು ಸರ್ಕಾರ ಸಿದ್ಧವಿಲ್ಲ ಎಂಬ ಧಾಟಿಯಲ್ಲಿ ಅರಣ್ಯ ಸಚಿವರು ಮಾತನಾಡಿದ್ದಾರೆ. ಈ ಅರಣ್ಯಗಳನ್ನು ವಿಶ್ವ ಪರಂಪರೆಯ ತಾಣಗಳ ಪಟ್ಟಿಗೆ ಸೇರಿಸುವ ಪ್ರಸ್ತಾವಕ್ಕೆ ರಾಜ್ಯ ಸರ್ಕಾರ 2006ರಲ್ಲಿಯೇ ಒಪ್ಪಿಗೆ ನೀಡಿದೆ ಎಂಬುದೂ ಸಚಿವರಿಗೆ ಗೊತ್ತಿಲ್ಲ!

ಇತಿಹಾಸ ಹಾಗೂ ಮನುಕುಲದ ಪರಂಪರೆಯ ಪ್ರತೀಕವಾಗಿರುವ ಸ್ಥಳಗಳನ್ನು ವಿಶ್ವ ಪರಂಪರೆಯ ತಾಣಗಳೆಂದು ಪರಿಗಣಿಸುವಂತೆ ಜಗತ್ತಿನ ಅನೇಕ ರಾಷ್ಟ್ರಗಳು ಯುನೆಸ್ಕೊಗೆ ಮನವಿ ಮಾಡಿಕೊಳ್ಳುತ್ತವೆ. ಪ್ರತಿ ವರ್ಷ ಯುನೆಸ್ಕೊ ಚರ್ಚೆ ನಡೆಸಿ ಅಪರೂಪದ ಸ್ಥಳಗಳನ್ನು ವಿಶ್ವ ಪರಂಪರೆಯ ತಾಣಗಳೆಂದು ಘೋಷಿಸುತ್ತದೆ. ಈ ತಾಣಗಳ ಸಂರಕ್ಷಣೆಗೆ ಯುನೆಸ್ಕೊ ಅನುದಾನ ಕೊಡುವುದಿಲ್ಲ. ಅವನ್ನು ಸಂರಕ್ಷಣೆ ಮಾಡುವ ಜವಾಬ್ದಾರಿ ಆಯಾ ದೇಶಕ್ಕೆ ಸೇರಿದ್ದು. ರಾಜ್ಯದ ಹತ್ತು ಅರಣ್ಯಗಳಿಗೆ ವಿಶ್ವ ಪರಂಪರೆಯ ತಾಣಗಳೆಂಬ ಮಾನ್ಯತೆ ಸಿಕ್ಕರೆ ಅವನ್ನು ಇನ್ನಷ್ಟು ಜತನದಿಂದ ನೋಡಿಕೊಳ್ಳುವ ಜವಾಬ್ದಾರಿ ಕರ್ನಾಟಕ ಸರ್ಕಾರದ್ದೇ ಹೊರತು ಯುನೆಸ್ಕೊದ್ದಲ್ಲ. ಈ ಅರಣ್ಯಗಳಲ್ಲಿ ಗಣಿಗಾರಿಕೆ, ಪ್ರವಾಸೋದ್ಯಮ ಹಾಗೂ ಅಭಿವೃದ್ಧಿ ಹೆಸರಿನಲ್ಲಿ ಕಾಡಿನ ಪ್ರದೇಶವನ್ನು ಬೇಕಾಬಿಟ್ಟಿಯಾಗಿ ಬಳಸಿಕೊಳ್ಳಲು ಅವಕಾಶ ಇರುವುದಿಲ್ಲ. ಈ ಕಾಡುಗಳಲ್ಲಿ ಪ್ರಾಣಿಗಳೂ ಸೇರಿದಂತೆ ಎಲ್ಲ ಜೀವ ವೈವಿಧ್ಯಗಳಿಗೆ ಸ್ವಲ್ಪವೂ ತೊಂದರೆ ಆಗದಂತೆ ನೋಡಿಕೊಳ್ಳಬೇಕಾಗುತ್ತದೆ. ಈ ಕಾರ್ಯದಲ್ಲಿ ಲೋಪವಾದರೆ ವಿಶ್ವ ಪರಂಪರೆಯ ತಾಣ್ಯದ ಮಾನ್ಯತೆ ರದ್ದಾಗುತ್ತದೆ. ರಾಜ್ಯದ ಹತ್ತು ಅರಣ್ಯಗಳಿಗೆ ವಿಶ್ವ ಪರಂಪರೆಯ ತಾಣಗಳ ಮಾನ್ಯತೆ ಸಿಕ್ಕರೆ ಅವನ್ನು ಸಂರಕ್ಷಣೆ ಮಾಡುವ ನೆಪದಲ್ಲಾದರೂ ಅರಣ್ಯ ನಾಶವನ್ನು ತಡೆಯಬಹುದು ಎಂಬ ಪ್ರಾಥಮಿಕ ಕಲ್ಪನೆಯೂ ನಮ್ಮ ಅರಣ್ಯ ಸಚಿವರಿಗೆ ಇಲ್ಲದಿರುವುದು ದುರದೃಷ್ಟಕರ.

ಗಣಿಗಾರಿಕೆ, ಜಲ ವಿದ್ಯುತ್ ಯೋಜನೆಗಳು ಹಾಗೂ ಪ್ರವಾಸೋದ್ಯಮದ ಹೆಸರಿನಲ್ಲಿ ನಮ್ಮ ರಾಜ್ಯದ ಅರಣ್ಯಗಳು ನಾಶವಾಗುತ್ತಿವೆ. ಪ್ರವಾಸೋದ್ಯಮದ ಹೆಸರಿನಲ್ಲಿ ಕಾಡಿನ ಒತ್ತುವರಿ ಆಗುತ್ತಲೇ ಇದೆ. ನಿತ್ಯ ಹಸಿರಿನ ದಟ್ಟಕಾಡುಗಳಲ್ಲಿ ರೆಸಾರ್ಟ್, ಸ್ಟೇ ಹೋಮ್‌ಗಳು ತಲೆ ಎತ್ತಿವೆ. ಅರಣ್ಯಗಳಲ್ಲಿ ಜನರ, ವಾಹನಗಳ ಓಡಾಟ ಹೆಚ್ಚಾಗಿದೆ. ಪ್ರಭಾವಿ ವ್ಯಕ್ತಿಗಳು ಅರಣ್ಯ ಒತ್ತುವರಿಯಲ್ಲಿ ತೊಡಗಿದ್ದಾರೆ. ಈ ಎಲ್ಲ ಬೆಳವಣಿಗೆಗಳಿಂದಾಗಿ ಸಾವಿರಾರು ವರ್ಷಗಳಿಂದ ಈ ಕಾಡುಗಳಲ್ಲಿ ಬದುಕುತ್ತಿರುವ ವನ್ಯಜೀವಿಗಳು ಆತಂಕದಲ್ಲಿವೆ. ಅವುಗಳ ಸಹಜ ಓಡಾಟದ ಹಾದಿಗಳೆಲ್ಲ ಮುಚ್ಚಿಹೋಗುತ್ತಿವೆ. ಕಾಡಿನಲ್ಲಿ ಅವುಗಳಿಗೆ ಆಹಾರ ಹಾಗೂ ನೀರಿನ ಕೊರತೆ ಕಂಡುಬಂದಿದೆ. ಅತಂತ್ರ ಸ್ಥಿತಿಯಲ್ಲಿರುವ ಆನೆ, ಹುಲಿ, ಚಿರತೆ ಇತ್ಯಾದಿ ಪ್ರಾಣಿಗಳು ಕಾಡು ಬಿಟ್ಟು ಊರುಗಳತ್ತ ಬರುತ್ತಿವೆ. ಇದನ್ನು ತಡೆಯಲು ಕನಿಷ್ಟ ಕಾರ್ಯಕ್ರಮಗಳನ್ನೂ ಹಾಕಿಕೊಳ್ಳದ ಸರ್ಕಾರ ರಾಜ್ಯದ ಹತ್ತು ಅರಣ್ಯಗಳನ್ನು ವಿಶ್ವ ಪರಂಪರೆಯ ಪಟ್ಟಿಗೆ ಸೇರಿಸುವ ಉತ್ತಮ ಅವಕಾಶವನ್ನು ನಿರಾಕರಿಸುವ ನಿರ್ಧಾರ ಹೊಣೆಗೇಡಿತನದ ಪರಮಾವಧಿ.

■ ಪ್ರೇಮಕುಮಾರ್ ಹರಿಯಬ್ಬೆ

